ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:1828/2014

ಚಾಸಾ:2 ಪ್ರಾಸಾ:2

ದಿನಾಂಕ: 01.08.2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಸಂತೋಷ |
| ತಂದೆಯ ಹೆಸರು | : | ಮಹಾಬಲ ಪೂಜಾರಿ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ಚಾಲಕ |
| ವಾಸ ಸ್ಥಳ | : | ಅಲ್ಲೂರು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ದಿ: 29-05-2014 ರಂದು ನನ್ನ ತಂಗಿಯ ಮದುವೆ ಇದ್ದು, ನನ್ನ ಮನೆಯ ಅಂಗಳದಲ್ಲಿ ಹೊಂಡ ಇದ್ದ ಕಾರಣ ನಾನು ಒಂದು ಟ್ರಿಪ್ ಟಿಪ್ಪರ್ ನಲ್ಲಿ ಮಣ್ಣು ಹೇಳಿದ್ದು, ದಿ: 08-05-2014 ರಂದು ಮಣ್ಣು ಬಂದಿದ್ದು, ಮಧ್ಯಾಹ್ನ 1-15 ಗಂಟೆಗೆ ನಾವು ಟಿಪ್ಪರ್ ಹತ್ತಿರ ಹೋದಾಗ ನ್ಯಾಯಾಲಯದ ಮುಂದೆ ಇರುವ 1 ರಿಂದ 4ನೇ ಆರೋಪಿತರು ನಮ್ಮನ್ನು ಉದ್ದೇಶಿಸಿ ಸೂಳೆ ಮಗ, ಬೇವರ್ಶಿ ಎಂದು ಅವಾಚ್ಯ ಶಬ್ದಗಳಿಂದ ಬೈದು ನಮ್ಮ ಮೇಲೆ ಹಲ್ಲೆ ಮಾಡಲು ಮುಂದಾಗಿರುತ್ತಾರೆ. ಪ್ರಾಸಾ-1ರವರ ಎರಡೂ ಕೈಗಳಿಗೆ 1ನೇ ಆರೋಪಿ ರಾಡಿನಿಂದ ಹೊಡೆದು ಬೆನ್ನಿಗೆ ಹಾಗೂ ತಲೆಗೆ ಕೈಗಳಿಂದ ಹೊಡೆದು ಜುಟ್ಟು ಹಿಡಿದು ಹೊಡೆದಿರುತ್ತಾರೆ. ಉಳಿದ ಆರೋಪಿತರು ನನಗೂ ಮತ್ತು ಚಾಸಾ-3ರವರಿಗೂ ಕೈಗಳಿಂದ ಹೊಡೆದಿರುತ್ತಾರೆ.

ದಾರಿಯಲ್ಲಿ ಬಂದರೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ಪ್ರಾಸಾ-1ರವರು ತೀವ್ರವಾಗಿ ಗಾಯಗೊಂಡಿದ್ದ ಕಾರಣ ಕುಂದಾಪುರದ ಸರಕಾರಿ ಆಸ್ಪತ್ರೆಗೆ ದಾಖಲಿಸಿ

ಆಕೆಗೆ ದಿಃ 09-05-2014 ರಂದು ಶಸ್ತ್ರ ಚಿಕಿತ್ಸೆಗೆ ವ್ಯವಸ್ಥೆ ಇಲ್ಲ ಎಂದು ಹೇಳಿದ ಕಾರಣ ಮಂಜುನಾಥ ಆಸ್ಪತ್ರೆಗೆ ದಾಖಲಿಸಿರುತ್ತೇವೆ. ಸದ್ರಿ ದಿನ ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ. ದಿಃ 11-05-2014 ರಲ್ಲಿ ಪ್ರಾಸಾ-1ರವರನ್ನು ಆಸ್ಪತ್ರೆಯಿಂದ ಬಿಡುಗಡೆಗೊಳಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುಮಾ1 ನ್ನು ನೋಡಿ ಅದರಿಂದಲೇ ಪ್ರಾಸಾ-1ರವರಿಗೆ ಹಲ್ಲೆ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ.

ಆಸ್ಪತ್ರೆಯಲ್ಲಿ ಪೊಲೀಸರು ಪ್ರಾಸಾ-1ರವರನ್ನು ವಿಚಾರಿಸಿ ಅವರ ಹೇಳಿಕೆ ಪಡೆದಿರುತ್ತಾರೆ. ದಿಃ 09-05-2014 ರಂದು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಅದೇ ದಿನ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಶಿವ ಭಂಡಾರಿಯವರ ಮನೆಯ ಪಕ್ಕದ ಶಾಮೀಯಾನ ಕಂಬವನ್ನು ವಶಕ್ಕೆ ಪಡೆದಿರುತ್ತಾರೆ. ಅದನ್ನು ನಾನೇ ಪೊಲೀಸರಿಗೆ ತೋರಿಸಿರುತ್ತೇನೆ. ಆ ವೇಳೆಗೆ ಮಹಜರು ಕ್ರಮ ಜರುಗಿಸಿ ನನ್ನ ಸಹಿ ಪಡೆದಿರುತ್ತಾರೆ. ಮಹಜರನ್ನು ಸಂಜೆ 4-30 ಗಂಟೆಗೆ ಮಾಡಿರುತ್ತಾರೆ. ಸಾಕ್ಷಿಯು ಸದ್ರಿ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದ್ರಿ ದಾಖಲೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ಭಾಗಶಃ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**<u>ವಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ</u>**

ನಾನು, ಚಾಸಾ1 ಮತ್ತು 3ರವರು ಟಿಪ್ಪರ್ ಬಳಿ ಹೋದಾಗ ಆರೋಪಿತರು ನಮ್ಮನ್ನು ಅಡ್ಡಗಟ್ಟಿದ್ದರು ಎಂದರೆ ಸರಿ. ಆರೋಪಿತರು ನಮ್ಮ ಪಕ್ಕದ ಮನೆಯವರು. ದಿಃ 09-05-2014ರಲ್ಲಿ ಪೊಲೀಸರು ಮಹಜರು ಕ್ರಮ ನಡೆಸುವಾಗ ನಾನು ನಮ್ಮ ಮನೆಯ ಬಳಿ ಹೇಳಿಕೆ ನೀಡಿರುತ್ತೇನೆ. ನಿಪಿ-2ನ್ನು ಮಧ್ಯಾಹ್ನ 2 ರಿಂದ 3 ಗಂಟೆಯವರೆಗೆ ಜರುಗಿಸಲಾಯಿತು ಎಂದರೆ ಸರಿ. ನನಗೆ ಮತ್ತು ಚಾಸಾ-3ರವರಿಗೆ ನೋವುಗಳು ಉಂಟಾಗಿದ್ದು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇವೆ. ಅದಕ್ಕೂ ಮೊದಲು ನಾನು ಕುಂದಾಪುರದ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿ.

**<u>ವಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಬಿ. ಆರ್.ಎನ್ ರವರಿಂದಃ</u>**

ದಾರಿ ವಿಚಾರದಲ್ಲಿ ನಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ಇಲ್ಲ. ಯಾವ ಕಾರಣಕ್ಕಾಗಿ ಗಲಾಟೆಯಾಗಿದೆ ಎಂದು ನನಗೆ ಗೊತ್ತಿಲ್ಲ. ಈ ಘಟನೆಯ ಕುರಿತು ಪ್ರಾಸಾ-1ರವರು ದೂರು ನೀಡಿರುತ್ತಾರೆ. ಪ್ರಾಸಾ-1ರವರ ಹೇಳಿಕೆಯನ್ನು ಪೊಲೀಸರು ಬರೆದುಕೊಂಡಿರುತ್ತಾರೆ. ನಿಪಿ-1ನ್ನು ನಾನು ಓದಿ ತಿಳಿದುಕೊಂಡಿಲ್ಲ. ಬೋಳಿ ಮಗನೇ, ಸೂಳಾ ಮಗನೇ, ಬೇವರ್ಶಿ ಎಂದು ಅವಾಚ್ಯ ಶಬ್ದಗಳಿಂದ ನಿಂಧಿಸಿದ್ದನ್ನು ನಾನು ಪೊಲೀಸರಿಗೆ ಹೇಳಿರುತ್ತೇನೆ. ಸರಕಾರಿ ಆಸ್ಪತ್ರೆಯಲ್ಲಿ ನಾನು ಪ್ರಾಥಮಿಕ ಚಿಕಿತ್ಸೆಯನ್ನು ಪಡೆದಿರುತ್ತೇನೆ. ನಾನು ಮಂಜುನಾಥ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ. ಪ್ರಾಸಾ-1ರವರು ಮಾತ್ರ ಮಂಜುನಾಥ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ.

ದಿಃ 09-05-2014 ರಂದು ಪ್ರಾಸಾ-1ರವರನ್ನು ಮಂಜುನಾಥ ಆಸ್ಪತ್ರೆಗೆ ದಾಖಲಿಸಿದ್ದು ದಿಃ 11-05-2014 ರವರೆಗೆ ಆಕೆ ಒಳರೋಗಿಯಾಗಿದ್ದರು. ಮಂಜುನಾಥ ಆಸ್ಪತ್ರೆಯಲ್ಲಿ ಸೇರಿಸಿದ್ದ ಬಗ್ಗೆ ದಾಖಲಾತಿಗಳು ಇರುವುದಾಗಿದೆ ಎಂದು ನನ್ನ ಬಳಿ ತಿಳಿಸಿರುತ್ತಾರೆ. ನನ್ನ ಎಡಭುಜಕ್ಕೆ ಕಣ್ಣಿಗೆ ಕಾಣುವಂತಹ ಗಾಯವಾಗಿತ್ತು. ನಾನು ಒಳರೋಗಿಯಾಗಿ ದಾಖಲಾಗಿರಲಿಲ್ಲ. ಮಹಾಬಲ ಪೂಜಾರಿ ನನ್ನ ತಂದೆ. ನನ್ನ ತಂದೆ, ಚಾಸಾ-1, ನಾನು ಹಾಗೂ ಚಾಸಾ-3ರವರ ವಿರುದ್ದ ಒಂದು ಪ್ರಕರಣವು ಮೊಕದ್ದಮೆ ಸಂಖ್ಯೆ 119/2014 ರಂತೆ ಅದೇ ದಿನಾಂಕದಂದು ನಾವು ಹಲ್ಲೆ ಮಾಡಿರುವುದಾಗಿ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

ಸದ್ರಿ ಹಲ್ಲೆ ನಾವು ಬಸವ ಪೂಜಾರಿ -2ನೇ ಆರೋಪಿ ಎಂಬುವರ ಮೇಲೆ ಮಾಡಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ದಿಃ 09-05-2014ರಂದು ನನ್ನ ಹೇಳಿಕೆಯನ್ನು ನಮ್ಮ ಮನೆಯ ಮುಂದಿನ ಓಣಿಯಲ್ಲಿ ಹೇಳಿರುತ್ತೇನೆ. ಅದರಲ್ಲಿ ಪೊಲೀಸರಿಗೆ ದಾರಿಯ ವಿಚಾರದಲ್ಲಿ ಗಲಾಟೆ ಆಗಿತ್ತು ಎಂದು ಹೇಳಿರುತ್ತೇನೆ. ಈ ಹಿಂದೆ ನನ್ನ ಅಡ್ಡ ವಿಚಾರಣೆಯಲ್ಲಿ ಯಾವ ವಿಚಾರಕ್ಕಾಗಿ ನಮ್ಮ ನಡುವೆ ಗಲಾಟೆ ನಡೆದಿತ್ತು ಎಂದು ನನಗೆ ತಿಳಿದಿಲ್ಲವಾಗಿ ಸುಳ್ಳಾಗಿ ನುಡಿರುತ್ತೇನೆಂದರೆ ಸರಿಯಲ್ಲ. ದಾರಿಯ ವಿಚಾರದಲ್ಲಿ ಗಲಾಟೆಯಾಗಿದೆ ಎಂದು ಪೊಲೀಸರಿಗೆ ಹೇಳಿರುತ್ತೇನೆ. ಈ ಘಟನೆಯ ಬಗ್ಗೆ ಸಂಪೂರ್ಣವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ದಾರಿಯ ವಿಚಾರದಲ್ಲಿ 2ನೇ ಆರೋಪಿಯ ಮುಂದೆ ಪೂರ್ವ ದ್ವೇಷದಿಂದ ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿರಂತರವಾಗಿ ಆತನ ವಿರುದ್ದ ಸುಳ್ಳು ದೂರುಗಳನ್ನು ನೀಡುವುದು ನಮ್ಮ ಹವ್ಯಾಸ ಎಂದರೆ ಸರಿಯಲ್ಲ. ಮುಮಾ1 ಶ್ಯಾಮಿಯಾನದ ಕಂಬ ಎಂದರೆ ಸರಿ. ನಾನು ಪೊಲೀಸರಿಗೆ ನೀಡಿರುವ

ಹೇಳಿಕೆಯಲ್ಲಿ ಶ್ಯಾಮಿಯಾನ ಕಂಬದಿಂದ ಪ್ರಾಸಾ-1ರವರಿಗೆ ಹೊಡೆದಿರುವುದಾಗಿ ಹೇಳಿರುತ್ತೇನೆ. ಶ್ಯಾಮಿಯಾನದ ಕಂಬ ಮತ್ತು ರಾಡ್ ಎರಡೂ ಬೇರೆ ಬೇರೆ ಎಂದರೆ ಸರಿ. ಸಾಕ್ಷಿಗೆ ದಿಃ 09-05-2014ರ ಪೊಲೀಸ್‌ರ ಮುಂದೆ ನೀಡಿದ ಹೇಳಿಕೆಯಲ್ಲಿ ರಾಡಿನಿಂದ ಪ್ರಾಸಾ-1ರವರಿಗೆ ಹೊಡೆದಿದ್ದಾರೆ ಎಂದು ಹೇಳಿದ ಹೇಳಿಕೆಯನ್ನು ಓದಿ ತಿಳಿಸಿದ್ದು, ಅದು ತಪ್ಪಾಗಿರುತ್ತದೆ ಎಂದರೆ ಸರಿ. ನನಗೆ ಬೇಕಾದ ರೀತಿಯಲ್ಲಿ ಸಾಕ್ಷಿ ನುಡಿದು ಸುಳ್ಳು ಸಾಕ್ಷ್ಯ ನುಡಿಯಲು ಪ್ರಯತ್ನಿಸುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ 1 ಬಾರಿ ಪೊಲೀಸ್ ಠಾಣೆಗೆ ಭೇಟಿ ನೀಡಿರುತ್ತೇನೆ. ಅಲ್ಲಿ ಸಹಿ ಹಾಕಿದ್ದ ಬಗ್ಗೆ ನೆನಪಿಲ್ಲ. ಸಾಕ್ಷಿಗೆ ನಿಪಿ-2 ರಲ್ಲಿನ ಸಹಿ ತೋರಿಸಿದ್ದು ಅದನ್ನು ಠಾಣೆಯಲ್ಲಿ ಮಾಡಿರುವುದು ಸರಿ ಎಂದು ಒಪ್ಪಿರುತ್ತಾರೆ. ನಾನು ಈ ಮೇಲೆ ಹೇಳಿದಂತೆ ಯಾವುದೇ ಘಟನೆ ನಡೆಯದೆ ಇದ್ದರೂ ಅದನ್ನು ಪ್ರಕರಣಕ್ಕಾಗಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಪ್ರಾಸಾ-1ರವರಿಗೆ ಮುಮಾ1 ರಿಂದ ಯಾವುದೇ ಹಲ್ಲೆಯಾಗಿಲ್ಲ ಎಂದರೆ ಸರಿಯಲ್ಲ. ಆಕೆ ಮಂಜುನಾಥ ಆಸ್ಪತ್ರೆಯಲ್ಲಿ ಯಾವುದೇ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಪ್ರಾಸಾ-1ರವರು ಬಿದ್ದು ಕೈ ಮುರಿದುಕೊಂಡಿದ್ದು ಅದನ್ನು ಉಪಯೋಗಿಸಿಕೊಂಡು ಈ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ನಾನು ವಿಮೆಯನ್ನು ಪಡೆದಿರುತ್ತೇನೆ. ಮಹಡಿಯಿಂದ ಕೆಳಗೆ ಬಿದ್ದು ಅದರಲ್ಲಿ ಆದ ಗಾಯವನ್ನು ದುರಪಯೋಗಪಡಿಸಿಕೊಂಡು ಸುಳ್ಳಾಗಿ ವಿಮೆ ಪರಿಹಾರ ಪಡೆದಿರುತ್ತೇನೆಂದರೆ ಸರಿಯಲ್ಲ. ಸುಳ್ಳು ನುಡಿಯುದೇ ನನ್ನ ಹವ್ಯಾಸ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**